ಕೋಟಿಯನ್ನೋ ಕೊಡುವುದಕ್ಕೆ ಏನು ತೊಂದರೆ? 2 ಕೋಟಿ ರೂಪಾಯಿ ಸಹಾಯಧನವಾಗಿ ಬಡ್ಡಿ ರಹಿತವಾಗಿ ಸಾಲ ಕೊಡಿ. ಇಲ್ಲದಿದ್ದರೆ ಅವರು ಬದುಕುವುದಕ್ಕೆ ಕಷ್ಟ ಇದೆ. ಡೆಲ್ಲಿಗೆ ಹೋಗಿ ನಾವು ಏನು ಮಾಡುವುದು? ಅನೇಕ ವಿಚಾರಗಳ ಬಗ್ಗೆ ನಾವು ಡೆಲ್ಲಿಗೆ ಹೋಗಿದ್ದೇವೆ. ಅಧಿಕಾರಿಗಳೂ ಹೋಗಿದ್ದಾರೆ. ಹೋಗಿ ಕರ್ನಾಟಕ ಭವನದಲ್ಲಿದ್ದು ಬರಬೇಕು. ಕೇಂದ್ರ ಸರ್ಕಾರದಲ್ಲಿ ಇರುವವರು ನಮ್ಮ ರಾಜ್ಯದ ಗೋಳನ್ನು ಕೇಳುವುದಕ್ಕೆ ತಯಾರು ಇಲ್ಲ, ಎಲ್ಲದಕ್ಕೂ ಡೆಲಿಗೇಷನ್ ಹೋಗುತ್ತೇವೆ ಎಂದರೆ ಸಮಾಧಾನವಾಗುವುದಿಲ್ಲ. ರಾಜ್ಯ ಸರ್ಕಾರದವರು ಈ ರೈತರಿಗೆ ಸಹಾಯಧನ ಕೊಡುವುದಕ್ಕೆ ತೊಂದರೆ ಏನಿದೆ? ಆ ರೈತರಿಗೆ 2 ಕೋಟಿ ರೂಪಾಯಿ ಕೊಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಯಾವ ರೀತಿ ಸಹಾಯ ಕೊಡಬೇಕು ಈಗ ಇರತಕ್ಕಂಥ ಕಷ್ಟವನ್ನು ಬಗೆಹರಿಸಬಹುದೇ ಎಂದು ತೀರ್ಮಾನಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಹಾಯ ಕೊಡುವುದನ್ನು, ಅವರು ಒಪ್ಪಿಕೊಳ್ಳಬೇಕು. ಮೊದಲು ಸಹಾಯ ಕೊಡುತ್ತೇವೆ ಎನ್ನುವುದು ಸರ್ಕಾರ ತೀರ್ಮಾನ ಮಾಡಲಿ ಆಮೇಲೆ ಯಾವ ರೀತಿ ಕೊಡಬೇಕು ಎನ್ನುವುದನ್ನು ನಾವು ಯೋಚನೆ ಮಾಡೋಣ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಸಮಾಲೋಚನೆ ಮಾಡಿ ಆಮೇಲೆ ನಾನು ಮುಂದೆ ಉತ್ತರ ಹೇಳಬೇಕಾಗುತ್ತದೆ. ಈಗಲೇ ಸಹಾಯ ಕೊಡುತ್ತೇವೆ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಸರ್ವೆ ನಂ 33ರಲ್ಲಿ ರಕ್ಷಣಾ ಇಲಾಖೆಯವರಿಂದ ಭೂ ಸ್ವಾಧೀನ

628 - ಶ್ರೀ ಎಸ್. ಚಿಕ್ಕಮಾದು (ಹುಣಸೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಕುಪ್ಪೆ-ಕೊಳಗಟ್ಟ ಸರ್ವೆ ನಂ 33ರಲ್ಲಿ ಸುಮಾರು 1000 ಕುಟುಂಬಗಳಿಗೆ ಸೇರಿದ 1200 ಎಕರೆ ಜಮೀನನ್ನು ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯ ವಾರಪೇರ್ ರೇಂಜ್‌ಗಾಗಿ ಸ್ವಾಧೀನ ಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಜಮೀನಿಗೆ ಬದಲಾಗಿ ಬೇರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಇ) ಸ್ವಾಧೀನ ಪಡಿಸಿಕೊಳ್ಳುವುದು ಖಚಿತವಾಗಿದ್ದಲ್ಲಿ ಈ ಜಮೀನನ್ನೇ ನಂಬಿ ಜೀವನ ನಡೆಸುತ್ತಿರುವ 1000 ಕುಟುಂಬಗಳಿಗೆ ಸರ್ಕಾರವು ಕೈಗೊಳ್ಳಲಿರುವ ಬದಲಿ ವ್ಯವಸ್ಥೆಯೇನು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿಗಳು) :

ಅ) ಬಂದಿದೆ.

ಆ) ಇಲ್ಲ.

ಇ) ಕಾಯಿದೆಯಂತೆ ಸೂಕ್ತ ಪರಿಹಾರ ನೀಡಲಾಗುವುದು.

ಶ್ರೀ ಎಸ್. ಚಿಕ್ಕಮಾದು : ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಕೇಳಿದ್ದೇನೆ. ಏನು ಈ 1200 ಎಕರೆ ಜಮೀನನ್ನು ತಾವು ಸ್ವಾಧೀನ ಪಡಿಸಿಕೊಳ್ಳುತ್ತಾ ಇದ್ದೀರಿ. ಈ ಜಮೀನಿಗೆ ಬದಲಿ ಜಮೀನನ್ನು ಏತಕ್ಕೆ ಸ್ವಾಧೀನ ಪಡಿಸಿಕೊಳ್ಳಬಾರದು. ಆದರೆ ಉತ್ತರದಲ್ಲಿ ಇಲ್ಲ ಎಂದು ಹೇಳುತ್ತಾರೆ. ಇದರ ಉದ್ದೇಶ ಏನು ಎಂದು ಹೇಳಿದರೆ 1919ರಲ್ಲಿ ಕನ್ನಂಬಾಡಿ ಕಟ್ಟೆ ವ್ಯಾಪ್ತಿಯಲ್ಲಿ ಇದ್ದಂಥ ವಸ್ರಂಬಳ್ಳಿ ಗ್ರಾಮವನ್ನು ಕೃಷ್ಣರಾಜ ಸಾಗರ ಅಣೆಕಟ್ಟು ಕಟ್ಟಬೇಕು ಎನ್ನುವ ದೃಷ್ಟಿಯಿಂದ ಹುಣಸೂರು ತಾಲ್ಲೂಕಿಗೆ ಅವರನ್ನು ಸ್ಥಳಾಂತರಿಸಿದ್ದರು. ಈಗ ಅದೇ ರೈತರನ್ನು ಕೇಂದ್ರ ಸರ್ಕಾರದ ವಾರ್‌ಫೇರ್ ರೇಂಜ್‌ಗೆ ಬೇಕು ಎಂದು ಹೇಳಿ ಅದೇ 1200ಎಕರೆ ಅಕ್ವೈರ್ ಮಾಡಿಕೊಂಡು ಇವತ್ತು ಅಲ್ಲಿಂದಲೂ ಕೂಡ ಸ್ಥಳಾಂತರಿಸುತ್ತಿದ್ದೀರಿ. ಅದಕ್ಕಾಗಿ ಕೇಳುತ್ತಿದ್ದೇನೆ. ಒಂದು ಸಾರಿ ರಾಜ್ಯದ ಹಿತದೃಷ್ಟಿಯಿಂದ ಒಕ್ಕಲು ಎಬ್ಬಿಸಿದ ಮೇಲೆ ಮತ್ತೆ ಇನ್ನೊಂದು ಕಡೆ ಒಕ್ಕಲು ಎಬ್ಬಿಸುತ್ತಾ ಇದ್ದೀರಲ್ಲ ಅದರಲ್ಲಿ ಅರ್ಥ ಏನು ಇದೆ. ಈ ಜಮೀನು ಬದಲಿಗೆ ಸರ್ಕಾರ ಬೇರೆ ಜಮೀನು ಏಕೆ ಕೊಡಬಾರದು.

ಶ್ರೀ ಎಂ. ರಾಜಶೇಖರ ಮೂರ್ತಿ : ಇದು ಸೆಂಟ್ರಲ್ ಗೌರ್ನಮೆಂಟ್ ಪ್ರಾಜೆಕ್ಟ್ ಅವರು ಅದೇ ಜಾಗ ಬೇಕು ಎಂದು ಕೇಳುತ್ತಿದ್ದಾರೆ ಅದೇ ಜಾಗ ಬೇಕು ಅಂದರೆ ನಾವು ಅಕ್ವೈರ್ ಮಾಡಕೊಡಬೇಕಾಗುತ್ತದೆ. ಅಕಸ್ಮಾತ್ ಬೇರೆ ಕಡೆ ಆ ವೇಳೆಯಲ್ಲಿ ಜಮೀನು ಇದ್ದರೆ ಅದನ್ನು ಅವರಿಗೆ ಕೊಡಬಹುದು ಕಾಂಪನ್‌ಸೇಷನ್ ಕೊಡುತ್ತೇವೆ ಕೊಡುವುದರ ಜೊತೆಗೆ ಜಮೀನು ಇದ್ದರೆ ಅದನ್ನೂ ಸಹಾ ಕೊಡುತ್ತೇವೆ.

ಶ್ರೀ ಎಸ್. ಚಿಕ್ಕಮಾದು : ಮಾನ್ಯ ಮಂತ್ರಿಗಳು ಹೇಳಿದ್ದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಪರಿಹಾರಕ್ಕೆ ತಾವು ಜಮೀನು ಬದಲಾಗಿ ಹುಣಸೂರು ತಾಲ್ಲೂಕಿನಲ್ಲಿ ಸಾಕಷ್ಟು ಅರಣ್ಯ ಇಲಾಖೆಗೆ ವ್ಯಾಪ್ತಿಗೆ ಬರತಕ್ಕಂಥ ಜಮೀನಿನಲ್ಲಿ ಎಷ್ಟು ಜನ ಎಷ್ಟು ಎಕರೆ ಜಮೀನು ಕಳೆದುಕೊಳ್ಳುತ್ತಾರೆ ಅಷ್ಟು ಎಕರೆ ಜಮೀನನ್ನು ಕೂಡ ತಾವು ಮಂಜೂರು ಮಾಡಿಕೊಡತಕ್ಕಂಥ ವಿಚಾರ ಸ್ವಾಗತಾರ್ಹ, ಆದರೆ ಪರಿಹಾರ ತಾವು ಏನು ಕೊಡುತ್ತೀರಿ. ತಮಗೆ ನಿಜವಾದ ಸಂಗತಿ ಹೇಳುತ್ತೇನೆ. 1919ರಿಂದ ಸ್ಥಳಾಂತರಿಸಿದಾಗ ಅಲ್ಲಿಂದ ಇಪತ್ತಿನವರೆಗೆ ಅವರು ಸ್ವಂತ ಮನೆಯನ್ನು ಕಟ್ಟಕೊಳ್ಳುವುದಕ್ಕೆ ಆಗದೆ ಅವತ್ತು ಫಾರೆಸ್ಟ್ ಇಲಾಖೆ ಕೊಟ್ಟಂಥ 1200 ಎಕರೆಯನ್ನು ಅವರು ಕಾಡುಗಳನ್ನು ಕಡಿದು ಹಸನು ಮಾಡಿ ಅವತ್ತು ಕೊಟ್ಟಿದ್ದರು. ಆದಕ್ಕೆ ತಕ್ಕಂಥ ಪರಿಹಾರವನ್ನು ಕೊಡಬೇಕು. ಸೂಕ್ತ ಪರಿಹಾರ ಕೊಡುತ್ತೇವೆ ಎಂದು ಮಂತ್ರಿಗಳು ಏನು ಹೇಳಿದ್ದಾರೆ. ಅಂದರೆ ಮಾನ್ಯ ಅಧ್ಯಕ್ಷಣಿಯವರೇ ಸಬ್ ರಿಜಿಸ್ಟಾರ್ ಕಛೇರಿಯಲ್ಲಿ ಆ ಜಾಗದಲ್ಲಿ ಏನು ಆ ಜಮೀನು ನೊಂದಣಿ ಆಗಿದೆ ಅದರ ಒಂದು ಸರಾಸರಿ ಮೇಲೆ ನಾವು ಪರಿಹಾರ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ ಇವತ್ತು ಏನಾಗಿದೆ ಎಂದರೆ ತಮಗೂ ಗೊತ್ತಿದೆ ರಾಜ್ಯಕ್ಕೂ ಗೊತ್ತು ಇದು ಮಾರ್ಕೆಟ್ ಬೆಲೆ ಏನಾಗಿದೆ ಎಂದರೆ 50 ಸಾವಿರ ರೂಪಾಯಿ ಎಕರೆ ನಡೆದಿದ್ದರೂ ಕೂಡ ರಿಜಿಸ್ಟರ್ ಆಗತಕ್ಕಂಥ ವೇಳೆಯಲ್ಲಿ 20 ಸಾವಿರ ರೂಪಾಯಿ ಎಂದು ರಿಜಿಸ್ಟರ್ ಆಗಿರುವ ಅನೇಕ ನಿದರ್ಶನಗಳನ್ನು ನಾವು ಕಂಡಿದ್ದೇವೆ. ಆದಕ್ಕೆ ಮಾನವೀಯತೆ ದೃಷ್ಟಿಯಿಂದ ಏನಾದರೂ ಪರಿಹಾರ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಅವರು ಹೇಳಿದರು ಸಬ್ ರಿಜಿಸ್ಟರ್ ಆಫೀಸಿನಲ್ಲಿ ಯಾವ ರೇಟು ನಿಗದಿ ಆಗಿದೆ ಆದನ್ನು ತೆಗೆದುಕೊಂಡರೆ ಇವರಿಗೆ ಬಹಳ ನಷ್ಟವಾಗುತ್ತದೆ ಏಕೆಂದರೆ ಸಬ್ ರಿಜಿಸ್ಟರ್ ಆಫೀಸಿನಲ್ಲಿ ಅಂಡರ್ ವ್ಯಾಲುವೇಶನ್ ಆಗಿರುವುದರಿಂದ ಅದೇ ರೀತಿಯಲ್ಲಿ ಅಪ್ಲೈ ಮಾಡಬೇಕು ಎಂದರೆ ತೊಂದರೆ ಆಗುತ್ತದೆ ಎಂದು ಹೇಳುವುದನ್ನು ಒಪ್ಪಬಹುದು. ಈಗ ಅಲ್ಲಿರತಕ್ಕಂಥ ರೈತರು ತಾವೇ ಮುಂದಾಗಿ ಬಂದಿದ್ದಾರೆ ನಾವು ಕೊಡುತ್ತೇವೆ ಎಂದು. ನೆಗೋಷಿಯೇಷನ್ ಮಾಡುತ್ತೇವೆ . ನೆಗೋಷಿಯೇಟ್ ಮಾಡುವಂಥ ಕಾಲದಲ್ಲಿ ಸ್ವಲ್ಪ ಏನು ಬೆಲೆ ಇದೆ ಆದಕ್ಕಿಂತ ಉತ್ತಮವಾದ ಬೆಲೆ ಕೊಡುತ್ತೇವೆ.

ಹೊಳೇನರಸೀಪುರ ತಾಲ್ಲೂಕಿನಲ್ಲಿ ತಾಳೆಎಣ್ಣೆ ಅಭಿವೃದ್ಧಿ ಯೋಜನೆ

180 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೇನರಸೀಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹೊಳೇನರಸೀಪುರ ತಾಲ್ಲೂಕಿನ ಗುಂಬೇವು ಗ್ರಾಮದ ಶ್ರೀ ಮಠಕಾವತ ಜಮೀನಿನಲ್ಲಿ ತಾಳೆ ಎಣ್ಣೆ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿತ್ತೇ?*

ಆ) *ಹಾಗಿದ್ದಲ್ಲಿ ಸದರಿ ಯೋಜನೆಯನ್ನು ಪ್ರಾರಂಭಿಸದಿರಲು ಕಾರಣವೇನು?*

ಇ) *ತಾಳೆ ಎಣ್ಣೆ ಅಭಿವೃದ್ಧಿ ಯೋಜನೆಯನ್ನು ಸರ್ಕಾರವು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು

ಆ) ತಾಳೆ ಎಣ್ಣೆ ಸಸ್ಯಗಾರದ ಪೂರ್ವಬಾವಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ.

ಇ) ಈ ಪ್ರದೇಶದಲ್ಲಿ ತಾಳೆ ಸಸ್ಯಗಾರಕ್ಕಾಗಿ ಬೇಕಾದ ದಾಸ್ತಾನು ಮಳಿಗೆ ಮತ್ತು ಕಾವಲು ವ್ಯವಸ್ಥೆಗಾಗಿ ಕಟ್ಟಡ ಕಟ್ಟಲು ಪ್ರಾರಂಭಿಸಲಾಗಿದೆ. ಬೇಲಿ ಮತ್ತು ನೀರಾವರಿ ವ್ಯವಸ್ಥೆ ಮಾಡಲಾಗುತ್ತಿದೆ. ಮೊಳೆತ ತಾಳೆ ಬೀಜಗಳು ಹೊರದೇಶದಿಂದ ಜನವರಿ 93ರ ಅಂತ್ಯಕ್ಕೆ ಬರಲಿದ್ದು, ಈ ಬೀಜಗಳನ್ನು ನಾಟಿಮಾಡಿ, ತಾಳೆ ಸಸಿಗಳನ್ನು ಅಕ್ಟೋಬರ್ ನವೆಂಬರ್ 93ರ ಹೊತ್ತಿಗೆ ರೈತರಿಗೆ ವಿತರಿಸಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಉಪಾಧ್ಯಕ್ಷಣಿಯವರೇ ಈಗ 93ರ ಹೊತ್ತಿಗೆ ತಾಳೆ ಸಸಿಗಳನ್ನು ರೈತರಿಗೆ ಹಂಚುತ್ತೇವೆ ಎಂದು ಹೇಳಿ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ಯೋಜನೆಗೆ ತಗಲತಕ್ಕ ವೆಚ್ಚ ಎಷ್ಟು? ಈ ವರ್ಷದಲ್ಲಿ ಎಷ್ಟು ಹಣ ವೆಚ್ಚ ಮಾಡಲಿದ್ದೀರಿ. ಪೂರಾ ಹಣ ಖರ್ಚಾಗಲಿಕ್ಕೆ ಎಷ್ಟು ದಿನ ಬೇಕಾಗುತ್ತದೆ. ಈ ಸಂದರ್ಭದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ? ತಾವು ರೈತರಿಗೆ ಕೊಡತಕ್ಕಂಥ ಆ ಇನ್ಸೆಂಟೀವ್ ಸಹಾಯಧನ ಎಷ್ಟು ದಯಮಾಡಿ ತಿಳಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ : ಮಾನ್ಯ ಅಧ್ಯಕ್ಷರೇ, ಈ ಉಪ ಪ್ರಶ್ನೆ ವಿಷಯದಲ್ಲಿ ಸರ್ಕಾರ ಇಲ್ಲಿಯವರೆಗೆ ಆಲೋಚನೆ ಮಾಡಿಲ್ಲ ಎಂದು ಹೇಳಿಬೇಕಾಗುತ್ತದೆ. ಏಕೆಂದರೆ ಆ ಮೊಳಕೆ ಬೀಜಗಳು ಹೊರ ದೇಶದಿಂದ ಬರಬೇಕು ಎಂಬುದು ಪ್ರಶ್ನೆ ಹಾಕಿದಂಥ ಸ್ನೇಹಿತರಿಗೆ ಗೊತ್ತಿದೆ, ಆದರೆ ಈಗ ಬೊಂಬಾಯಿಗೆ ಮೊಳಕೆ